**ದಿನಾಂಕ 23.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಂ ಜಿ ವಕೀಲರಿಂದಃ**

ನಾನು 9ನೇ ತರಗತಿಯವರೆಗೂ ಓದಿದ್ದೇನೆ. ನನ್ನ ತಾಯಿಯ ಓದಿಲ್ಲ. ಕೃಷ್ಣೇಗೌಡರವರು ಪಿ.ಯು.ಸಿ ವರೆಗೂ ಓದಿದ್ದಾರೆ. ಗಂಗಾಧರ್ ರವರು ಬಿ.ಎ ಓದಿದ್ದಾರೆ. ನನ್ನ ತಂದೆ ಇದ್ದಾಗಲೇ ನಾವು ಬೇರೆಯಾಗಿದ್ದೇವು. ನಾವು ಒಂದೇ ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸಾಕ್ಷಿಯು ಬೇರೆ ಬೇರೆ ಯಾಗಿದ್ದೇವು ಎಂದು ಹೇಳುತ್ತಾರೆ. ಅಂದರೆ ಚನ್ನಪಟ್ಟಣ ಮತ್ತು ಬೆಂಗಳೂರುನಲ್ಲಿ ಇದ್ದಾರೆ. ವಾದ ಪತ್ರದಲ್ಲಿ ವಿಳಾಸ ಒಂದೇ ಇದೆ ಎಂದರೆ ನಿಜ. ಎಲ್ಲರುದೂ ಆಧಾರ್ ಕಾರ್ಡ್ ಮತ್ತು ಪಡಿತರ ಗುರುತಿನ ಚೀಟಿ ಮತ್ತು ಮತದಾರರ ಗುರುತಿನ ಚೀಟಿ ಅರಳಾಳುಸಂದ್ರದಲ್ಲಿ ಇದೆ. ಆಸ್ತಿಯು ಬೇರೆ ಆಗಿರುವುದಕ್ಕೆ ದಾಖಲೆ ಕೊಟ್ಟಿಲ್ಲ. ನನ್ನ ತಂದೆಗೆ 3½ ಎಕರೆ ಜಮೀನು ಇದೆ. ನನ್ನ ತೀರಿಕೊಂಡ ನಂತರ ರೆವಿನ್ಯೂ ದಾಖಲೆಗಳು ಪ್ರತ್ಯೇಕವಾಗಿ ಆಗಿವೆ. ನನ್ನ ತಂದೆಗೆ ದಾವಾ ಆಸ್ತಿ ಬಿಟ್ಟು 4 ಎಕರೆ 17 ಗುಂಟೆ ಇತ್ತು ಎಂದರೆ ಸುಳ್ಳು. ನನ್ನ ತಂದೆ ತೀರಿಕೊಂಡ ನಂತರ ಈ ಆಸ್ತಿ ನಮ್ಮ ಹೆಸರಿಗೆ ರೆವಿನ್ಯೂ ದಾಖಲೆಗಳು ಆಗಿವೆ ಎಂದರೆ ನಿಜ. ವಕೀಲರು ಎಂ.ಆರ್ ಅನ್ನು ತೋರಿಸಿದಾಗ ಸಾಕ್ಷಿಯು ಒಪ್ಪುತ್ತಾರೆ. ಸದರಿ ಎಂ.ಆರ್ ನಿಆರ್-1 ಎಂದು ಗುರುತಿಸಲಾಯಿತು. ಈ ಮ್ಯೂಟೇಷನಂತೆ 9 ಪಹಣಿಗಳು ಆಗಿವೆ ಎಂದರೆ ಸಾಕ್ಷಿಯು ದಾವಾ ಆಸ್ತಿಯು ಬಿಟ್ಟು ಆಗಿದೆ ಎಂದು ಹೇಳುತ್ತಾರೆ. ವಕೀಲರು ಪಹಣಿಗಳನ್ನು ತೋರಿಸಿದಾಗ ಸಾಕ್ಷಿಯು ಒಪ್ಪುತ್ತಾರೆ. ಸದರಿ ಪಹಣಿಗಳನ್ನು ನಿಆರ್-2 ರಿಂದ 10 ಎಂದು ಗುರುತಿಸಲಾಯಿತು. ದಾವಾ ಆಸ್ತಿ ಈಗ ಎದುರುದಾರರ ಹೆಸರಿನಲ್ಲಿ ಇದೆ. ಈ ಬಗ್ಗೆ ದಾಖಲೆ ನೋಡಿದ್ದೇನೆ. ನನ್ನ ತಂದೆ ಎದುರುದಾರರಿಂದ 11 ಲಕ್ಷ ಸಾಲ ಪಡೆದಿದ್ದರೂ. 100 ಕ್ಕೆ 2 ರೂ. ಬಡ್ಡಿಯಂತೆ ಪಡೆದಿದ್ದರು. ಈ ಸಾಲಕ್ಕೆ ಜಮೀನು ಭದ್ರತೆ ಮಾಡಿಕೊಟ್ಟಿದ್ದರು. ಈ ಬಗ್ಗೆ ಬಡ್ಡಿ ಕೊಟ್ಟಿದ್ದಕ್ಕೆ ದಾಖಲೆ ಇಲ್ಲ. ನನ್ನ ತಂದೆ ತೀರಿಕೊಳ್ಳುವರೆಗೂ ಬಡ್ಡಿ ಕೊಟ್ಟಿದ್ದಾರೆ. ವಕೀಲರು ನಿಪಿ-4 ನ್ನು ತೋರಿಸಿದಾಗ ಸಾಕ್ಷಿಯು ನಮ್ಮ ತಂದೆ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನನ್ನ ತಂದೆ 11 ಲಕ್ಷ

ಪಡೆದಿದ್ದಾರೆ. 11 ಲಕ್ಷಕ್ಕೆ ವ್ಯವಹಾರ ಆಗಿದೆ ಎಂದರೆ ಸುಳ್ಳು. ನಿಪಿ-4 ರಲ್ಲಿ ಚೆಕ್ಕುಬಂಧಿ ಸರಿಯಿದೆ. ನಿಪಿ-4 ರಲ್ಲಿ ನನ್ನ ತಂದೆಯ ಸಹಿ ಇದೆ. ನನ್ನ ತಂದೆಗೆ ನೋಟೀಸ್ ಕೊಟ್ಟಿದ್ದರು ಎಂದರೆ ಸುಳ್ಳು. ನಿಪಿ-7 ರಲ್ಲಿ ನನ್ನ ತಂದೆಯ ಸಹಿ ಇಲ್ಲ. ಈ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು. ನಿಪಿ-8 ಮತ್ತು 9 ನೋಟೀಸ್‌ಗಳು ನನ್ನ ತಂದೆಗೆ ಜಾರಿಯಾಗಿಲ್ಲ.

ದಾವಾ ಆಸ್ತಿ ಚನ್ನಪಟ್ಟಣದವರಿಂದ ನನ್ನ ತಂದೆ ಪಡೆದಿದ್ದರು. ದಾವಾ ಆಸ್ತಿಯ ದಾಖಲೆಗಳನ್ನು ಎದುರುದಾರಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಒಂದು ಕೊಟ್ಟಿದ್ದರೂ ಎಂದು ಹೇಳುತ್ತಾರೆ. ಎದುರುದಾರರು ನ್ಯಾಯಾಲಯಕ್ಕೆ ಹಾಜರುಮಾಡಿರುವ ದಾಖಲೆಗಳನ್ನು ನೋಡಿಲ್ಲ. ನಮ್ಮ ತಂದೆಯ ಎಲ್ಲಾ ವ್ಯವಹಾರಗಳನ್ನು ನಮಗೆ ತಿಳಿಸುತ್ತಿದ್ದರೂ. ನನ್ನ ತಂದೆಗೆ ನೋಟೀಸ್ ಜಾರಿಯಾಗಿತ್ತು ಎಂದರೆ ಸುಳ್ಳು. ಅರ್ಜಿಯ ಅಂಶಗಳನ್ನು ನನ್ನ ತಾಯಿ ಹೇಳಿ ಬರೆಯಿಸಿದ್ದಾರೆ. ನಮ್ಮ ಅಣ್ಣನಿಗೆ ನೋಟೀಸ್ ಜಾರಿಯಾಗಿತ್ತು ಎಂದು ಅರ್ಜಿಯಲ್ಲಿ ತಿಳಿಸಿಲ್ಲ. ನಮ್ಮ ತಂದೆಯ ಪರವಾಗಿ ಗಂಗಧಾರ್ ರವರು ಸಮನ್ಸ್ ಪೆಡೆದಿದ್ದರೂ ಎಂದು ಅರ್ಜಿಯಲ್ಲಿ ತಿಳಿಸಿಲ್ಲ. ಈ ವಿಷಯ ನಾಗಲಿಂಗಯ್ಯ ರವರಿಗೆ ಗೊತ್ತಿಲ್ಲ ಎಂದರೆ ಸುಳ್ಳು. ನ್ಯಾಯಾಲಯದಲ್ಲಿ ಪ್ರಕ್ರಿಯೆಗಳನ್ನು ನಾವು ತಿಳಿದುಕೊಳ್ಳುತ್ತಿದ್ದೇವು ಎಂದರೆ ಸುಳ್ಳು. ಗಂಗಧಾರ್ ರವರಿಂದ ಸಾಕ್ಷಿಯನ್ನು ಹೇಳಿಸುತ್ತೇವೆ. ಹೆಚ್ಚಿಗೆ ಹಣ ಕೊಟ್ಟರೆ ಬರೆದುಕೊಡುತ್ತೇವೆ ಎಂದು ತಿಳಿಸುತ್ತೇವೆ ಎಂದರೆ ಸುಳ್ಳು. ಎಲ್ಲಾ ವಿಷಯಗಳು ಗೊತ್ತಿದ್ದು ಹಣದ ಆಸೆಗೆ ಸುಳ್ಳು ಸಾಕ್ಷಿ ಹೇಳುತ್ತೀನೆಂದರೆ ಸುಳ್ಳು. ದಾವಾ ವಿಷಯ ಮೊದಲೇ ಗೊತ್ತಿದ್ದರೂ ಪ್ರಸುತ್ತ ಅರ್ಜಿ ಹಾಕಿದ ನಂತರ ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತೀನೆಂದರೆ ಸುಳ್ಳು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ಎ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**